ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ,
ತರೀಕೆರೆ.

ಸಿಸಿ ನಂಬರ್.995/2023

| | | | |
|---|---|---|---|
| ಸಾಕ್ಷಿಯ ಹೆಸರು | : ರಾಜಾನಾಯ್ಕ | | ಸಿ.ಡಬ್ಲ್ಯು 2 |
| ತಂದೆಯ ಹೆಸರು | : ಶಂಕರಾನಾಯ್ಕ | | ಪಿ.ಡಬ್ಲ್ಯು 6 |
| ವಯಸ್ಸು | : 45 ವರ್ಷ | | |
| ಉದ್ಯೋಗ | : ಕೂಲಿ ಕೆಲಸ | | |
| ವಾಸ ಸ್ಥಳ | : ಬೇಲೇನಹಳ್ಳಿ ತಾಂಡ್ಯ | | |

ದಿನಾಂಕ:12.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ಈ ತೋರಿಸುತ್ತಿರುವ ಸಹಿ ನನ್ನದೇ ಇರುತ್ತದೆ. ಅದನ್ನು ಯಾವಾಗ ಎಲ್ಲಿ ಮತ್ತು ಏತಕ್ಕಾಗಿ ಮಾಡಿದ್ದೇನೆ ಎಂದು ನೆನಪಿಲ್ಲ. ನಾನು ತರೀಕೆರೆಗೆ ಬೇರೆ ಕೆಲಸದ ಮೇಲೆ ಬಂದಾಗ ಪೋಲೀಸರು ಕರೆದು ಸಹಿ ಪಡೆದುಕೊಂಡಿದ್ದಾರೆ. ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯ ಸಹಿಯನ್ನು ನಿಪಿ-1 (ಸಿ) ಎಂದು ಗುರುತಿಸಲಾಯಿತು.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:-

ದಿನಾಂಕ 16.11.2022 ರಂದು ನಾನು ಮತ್ತು ಚಾಸ-3 ರಸ್ತೆಯ ಬದಿಯಲ್ಲಿ ನಿಂತಿರುವಾಗ ಪೋಲೀಸರು ಬಂದು ದಾಳಿಯ ವಿಷಯವನ್ನು ತಿಳಿಸಿ ನಮಗೆ ಪಂಚರನ್ನಾಗಲು ಕೇಳಿದರು ಎಂದರೆ ಸರಿಯಲ್ಲ. ನಾವು ಒಪ್ಪಿಕೊಂಡು ಅವರ ಜೊತೆ ಹೋದೆವು ಎಂದರೆ ಸರಿಯಲ್ಲ. ನಾವು ಅವರ ಜೊತೆ ಹೋಗುತ್ತಿರಬೇಕಾದರೆ ಆರೋಪಿಯು ತನ್ನ ಕೈಯಲ್ಲಿದ್ದ ಚೀಲವನ್ನು ಗಾಬರಿಯಿಂದ ಎಸೆದು ಓಡಿಹೋದನು ಎಂದರೆ ಸರಿಯಲ್ಲ. ಆತನ ಚೀಲದಲ್ಲಿ 90 ಎಮ್.ಎಲ್ಲ.95 ಓಸಿ ಡಿಲಕ್ಸ್ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಇದ್ದವು ಎಂದರೆ ಸರಿಯಲ್ಲ. ಸದರಿ ಮದ್ಯವನ್ನು ಚಾಸ-1 ರವರು ನನ್ನ ಮತ್ತು ಚಾಸ-3 ರ ಸಮಕ್ಷಮ ನಿಪಿ-1 ರಂತೆ ಪಂಚನಾಮೆಯನ್ನು ಜರುಗಿಸಿ ತಮ್ಮ ವಶಕ್ಕೆ ಪಡೆದುಕೊಂಡರು, ಸ್ಥಳದಲ್ಲಿಯೇ ಪಂಚನಾಮೆ ಬರೆದು ನಮ್ಮಗಳ ಸಹಿ ಪಡೆದುಕೊಡಂರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಭಾವಚಿತ್ರವನ್ನು ಕೂಡ ತೆಗೆಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿ

ನಮ್ಮ ಊರಿನ ವ್ಯಕ್ತಿ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಇರುವುದಿಲ್ಲ ಎಂದು ಹೇಳುತ್ತಾರೆ.

<u>ಮರುವಿಚಾರಣೆ :</u> ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.